**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 402 /2019 ಸಿ.ಡಬ್ಲ್ಯೂ.19 ಪಿ.ಡಬ್ಲ್ಯೂ.14

| | |
|---|---|
| ಹೆಸರು | ಸುರೇಶಬಾಬು |
| ತಂದೆ/ಗಂಡ | ರುದ್ರಪ್ಪಾ |
| ವಯಸ್ಸು | 59 ವರ್ಷ |
| ಉದ್ಯೋಗ | ಸಿ.ಪಿ.ಐ ಗೋಕಾಕ |
| ವಾಸಸ್ಥಳ | ಗೋಕಾಕ |

ದಿನಾಂಕ 18-03-2026
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ನಾನು ದಿಃ 25-01-2017 ರಿಂದ ದಿಃ 04.10.2018 ರವರೆಗೆ ಪಿ.ಎಸ್.ಐ ಅಂತಾ ಆಳಂದ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25-01-2017 ರಂದು ಚಾಸ-18 ರವರ ಕಡೆಯಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆ ಕೈಗೊಂಡಿರುತ್ತೇನೆ. ದಿಃ 28-01-2017 ರಂದು ಎ.ಓ. ಸಂಜೀವ ರೇಡ್ಡಿರವರ ಕಡೆಯಿಂದ ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 06-10-2017 ರಂದು ಎ.ಓ. ರವರ ಕಡೆಯಿಂದ ದಾಖಲೆಗಳು ಬಂದಿದ್ದವು ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 02-10-2018 ರಂದು ತನಿಖೆ ಪೂರ್ಣ ಗೊಂಡ ಕಾರಣ ಆರೋಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ನಿಪಿ. 4 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4 (ಎ) ಅಂತಾ ಗುರುತಿಸಲಾಯಿತು. ನಿಪಿ. 2 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2(ಎ) ಅಂತಾ ಗುರುತಿಸಲಾಯಿತು. ನಿಪಿ. 14 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 14 (ಎ) ಅಂತಾ ಗುರುತಿಸಲಾಯಿತು. ನಿಪಿ. 3 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 (ಬಿ) ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಡಿ ಬಿ ವಕೀಲರಿಂದ:</u>

ನಾನು ಚಾಸಾ 18 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ಯಾವ ವಿಷಯವಾಗಿ ಪ್ರಕರಣ ಆಗಿರುತ್ತದೆ ಅಂತಾ ಪರಿಶೀಲನೆ ಮಾಡಿರುತ್ತೇನೆ ಮತ್ತು ಪಂಚಾಯತಿಯಲ್ಲಿ ನಡೆದ ಹಣದ ದುರ್ಬಳಕೆಯ ವಿಷಯವಾಗಿ ಪ್ರಕರಣ ಆಗಿರುತ್ತದೆ ಅಂತಾ ತಿಳಿದುಕೊಂಡಿರುತ್ತೇನೆ. ಫಲಾನುಭವಿಗಳ ದಾಖಲೆಗಳನ್ನು ನಾನು ತೆಗೆದುಕೊಂಡಿರುವುದಿಲ್ಲ. ಚಾಸಾ 18 ರವರಿಗೆ ದಾಖಲೆಗಳನು ಪಡೆದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ನಾನು ಚಾಸಾ 18 ಮತ್ತು ಎ.ಓ. ರವರು ಸಲ್ಲಿಸಿದ ದಾಖಲೆಗಳ ಮೇಲೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಕಡತಗಳನ್ನು ಪರಿಶೀಲನೆ ಮಾಡಿ ಸಲ್ಲಿಸಿರುತ್ತೇನೆ ಅಂತಾ ನುಡಿಯುತ್ತಾರೆ. ನನ್ನ

ತನಿಖಾಕಾಲದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಅಂತಾ ಕಂಡು ಬಂದಿದ್ದರೂ ಸಹಿತ ಅವರ ವಿರುದ್ದ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ